ಹಿಂದೆ ಅಜ್ಜ ಕೃಷ್ಣ ಭಟ್ಟ ಮಂತ್ರಗಿಂತ್ರ ಕಲಿತು ಬಹಳ ಶ್ರದ್ಧೆಯಿಂದ ದೇವಸ್ಥಾನದ ಪೂಜೆ ಮಾಡುತ್ತಿದ್ದ. ಊರಿನ ಈಶ್ವರ ದೇವಸ್ಥಾನದ ಪೂಜೆಯನ್ನು ಬಹಳ ಕಾಲದಿಂದ ಮಾಡುತ್ತಾ ಬಂದವನು ಕೃಷ್ಣ ಭಟ್ಟ.

ಅವನ ಮಗ ರಂಗಾಭಟ್ಟ ಅಲ್ಪ ಸ್ವಲ್ಪ ಮಂತ್ರ ಕಲಿತಿದ್ದ. ಆದರೆ, ಪೂಜೆಯನ್ನೂ ಶ್ರದ್ಧೆಯಿಂದ ಮಾಡುತ್ತಾ ಊರವರ ಅಚ್ಚು ಮೆಚ್ಚಿನವನಾಗಿದ್ದ. ಅಪ್ಪ ಅಷ್ಟೆಲ್ಲಾ ವರ್ಷ ಪೂಜೆ ಮಾಡುತ್ತಾ ಬಂದ ಮೇಲೆ ಇವನು ಇಷ್ಟಾದರೂ ಪೂಜಾ ಮಂತ್ರ ಕಲಿಯದಿದ್ದರಾಗುತ್ತದೆಯೇ? ರಂಗಾಭಟ್ಟನ ಕಾಲದಲ್ಲೂ ಸಮಸ್ಯೆ ಆಗದೆ ದೇವಸ್ಥಾನದ ಪೂಜೆ ಚೆನ್ನಾಗಿ ನಡೆದುಕೊಂಡು ಬಂತು. ಜೊತೆಗೆ, ತೋಟದ ಕೃಷಿಯಲ್ಲೂ ರಂಗಾಭಟ್ಟನಿಗೆ ಆಸಕ್ತಿ ಇದ್ದದ್ದರಿಂದ ಏನೂ ಸಮಸ್ಯೆಯಾಗಲಿಲ್ಲ. ಅನಂತರ ಮಗ ಶಂಕರನಾರಾಯಣ ಭಟ್ಟನ ಕಾಲದಲ್ಲಿ ಮಾತ್ರ ಸಮಸ್ಯೆ ಪ್ರಾರಂಭವಾಯಿತು. ಅಪ್ಪ

